

## ಎಳನೀರಿನ ಚಿಪ್ಪಿನಲ್ಲಿ ಹೂಕುಂಡ

ಎಳನೀರು ಕುಡಿದು ಎಲ್ಲೆಂದರಲ್ಲಿ ಬಿಸಾಡುವ ಬದಲು ಅದರ ಚಿಪ್ಪನ್ನು ಆಕರ್ಷಕ ಕುಂಡಗಳನ್ನಾಗಿ ಮಾಡಿ, ಅದರಲ್ಲಿ ಮಕ್ಕಳಿಂದ ಗಿಡ ನೆಡಿಸಿ ಪೋಷಿಸುವ ಕೆಲಸವನ್ನು ಉಡುಪಿಯ ಶಾರದಾ ರೆಸಿಡೆನ್ಶಿಯಲ್ ಶಾಲೆಯಲ್ಲಿ ಮಾಡಲಾಗಿದೆ. ಚಿಪ್ಪಿನ ಮೇಲೆ ಮಕ್ಕಳು ಸುಂದರ ಚಿತ್ರಗಳನ್ನು ಮೂಡಿಸಿ, ತಮ್ಮ ಕಲಾಭಿವ್ಯಕ್ತಿಯನ್ನು ಸೃಜನಶೀಲವಾಗಿ ಹೊರಹೊಮ್ಮಿಸಿದ್ದಾರೆ. ಜೊತೆಗೆ ಎಳನೀರು ಚಿಪ್ಪಿಗೆ ಮಣ್ಣು ತುಂಬಿಸಿ, ಅದರಲ್ಲಿ ಮನಿ ಪ್ಲಾಂಟ್, ಒಂದಲಗ, ಹರಿವೆ ಮುಂತಾದ ಸಸಿಗಳನ್ನು ನೆಟ್ಟಿದ್ದಾರೆ.

ಪ್ರತಿ 'ಹೂಕುಂಡ'ದ ಮೇಲೂ ಅದನ್ನು ಸೃಜನಾತ್ಮಕವಾಗಿ ಸಿದ್ಧಪಡಿಸಿದ ವಿದ್ಯಾರ್ಥಿಯ ಹೆಸರನ್ನು ನಮೂದಿಸಲಾಗಿದೆ. ಆ ಹೂಕುಂಡದ ಜವಾಬ್ದಾರಿಯೂ ಆ ವಿದ್ಯಾರ್ಥಿಗೆ ವಹಿಸಲಾಗಿದೆ. ಇಂತಹ ಇನ್ನೂರಕ್ಕೂ ಅಧಿಕ ಹೂಕುಂಡಗಳು ಶಾಲೆಯ ಆವರಣದಲ್ಲಿ ಹಚ್ಚ ಹಸುರಿನಿಂದ ನಳನಳಿಸುತ್ತಿವೆ. ಎಳನೀರು ಕುಡಿದು ಎಸೆಯಲ್ಪಡುವ ಚಿಪ್ಪುಗಳಲ್ಲಿ, ಮಳೆಗಾಲದಲ್ಲಿ ನೀರು ತುಂಬಿಕೊಂಡು ಸೊಳ್ಳೆಗಳ ಹೆಚ್ಚಳಕ್ಕೆ ಕಾರಣವಾಗುತ್ತದೆ. ಬಿಸಾಡುವ ಬದಲು ಹೂಕುಂಡದಂತೇ ಸೃಜನಶೀಲವಾಗಿ ಬಳಸಿಕೊಂಡರೆ ನಿರ್ಮಲ ವಾತಾವರಣಕ್ಕೆ ಕೊಡುಗೆ ನೀಡಿದಂತಾಗುತ್ತದೆ.

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ

## ಬಣ್ಣದ ಚಿಟ್ಟೆ ಅಲ್ಲ 'ಸುಣ್ಣದ ಚಿಟ್ಟೆ'



ತೋಟದಲ್ಲಿ ವಿಹರಿಸುತ್ತಿದ್ದಾಗ ವಿಶೇಷವಾದ ಚಿಟ್ಟೆಯೊಂದು ಕಣ್ಣಿಗೆ ಬಿತ್ತು. ಅದರ ಮೂಲವನ್ನು ಅರಸುತ್ತಾ ಹೋದಾಗ ತಿಳಿದ ಸತ್ಯವೆಂದರೆ ಅದು ಸುಣ್ಣದ ಚಿಟ್ಟೆ ಎಂಬುದು. ನಿಂಬೆ ಚಿಟ್ಟೆ ಎಂತಲೂ ಕರೆಸಿಕೊಳ್ಳುವ ಈ ಚಿಟ್ಟೆ ಹೆಸರು ಪ್ಯಾಪಿಲಿಯೊ ಡೆಮೋಲಿಯಸ್.

ಇದು ಸಾಮಾನ್ಯ ಚಿಟ್ಟೆಗಳಂತಲ್ಲದೆ ಆಕ್ರಮಣಕಾರಿ ಪ್ರಬೇಧದ ಚಿಟ್ಟೆಯಾಗಿದೆ. ಏಷ್ಯಾದ ಎಲ್ಲಾ ಭಾಗಗಳಲ್ಲಿಯೂ ಹೆಚ್ಚಾಗಿ ಕಂಡುಬರುತ್ತದೆ. ಇತರೆ ಚಿಟ್ಟೆಗಳಂತೆ ಹೂವಿಗೆ ಆಕರ್ಷಿತವಾಗದ ಇದಕ್ಕೆ ಮಣ್ಣು, ಕೊಚ್ಚೆಗುಂಡಿಗಳೇ ಆಕರ್ಷಣೀಯ ತಾಣವಾಗಿವೆ. ಹಸಿವಾದಾಗ

—ಪ.ನಾ.ಹಳ್ಳಿ ಹರೀಶ್ ಕುಮಾರ್, ತುಮಕೂರು



## ಕಪ್ಪು ಅರಿಶಿಣ ಗಿಡದ ಹೂವು

ಕಪ್ಪು ಅರಿಶಿಣದ ಗಿಡ ಬೆಳೆಸಿರುವುದು ಗೊತ್ತಾಗಿ, ಅಚ್ಚರಿಗೊಂಡ ನಾನು ಈಚೆಗೆ ಸ್ನೇಹಿತರೊಬ್ಬರ ತೋಟಕ್ಕೆ ಹೋಗಿದ್ದೆ. ನಾನು ಇದುವರೆಗೆ ಅಂತಹ ಕಪ್ಪು ಅರಿಶಿಣ ಮತ್ತು ಅದರ ಗಿಡವನ್ನು ಕಂಡಿರಲೇ ಇಲ್ಲ. ಗಿಡ ಕಂಡು ಖುಷಿಯಾಯಿತು. ಗಿಡದಲ್ಲಿ ಕಂಡ ಅದರ ಹೂವಿನ ಚೆಲುವು ಮನಸೆಳೆಯಿತು. ಇನ್ನು ಈ ಗಿಡವನ್ನು ತುಂಬಾ ಅಪರೂಪವೆಂಬಂತೆ ಕೆಲವೆಡೆ ಬೆಳೆಯಲಾಗುತ್ತದೆ. ಈ ಗಿಡವು ಜಿಂಜಿಬರೇಸಿ ಕುಟುಂಬಕ್ಕೆ ಸೇರಿದ ಮೂಲಿಕೆಯೂ ಆಗಿದ್ದು, ನೆಲದೊಳಗಿನ ಗಡ್ಡೆಗಳು, ಎಲೆಗಳು ಔಷಧೀಯ ಗುಣಗಳನ್ನು ಹೊಂದಿವೆ.

—ಪ್ರಕಾಶ್ ಎಸ್. ಮನ್ನಂಗಿ, ಮೂಟೆಬೆನ್ನೂರು

## ಆಲದ ಮರಕ್ಕೆ ಜೀವ ತುಂಬಿದ ಬಿಳಲು

ರಾಸಾಯನಿಕದಿಂದ ತನ್ನಿಡೀ ಒಡಲು ಸುಟ್ಟಿದ್ದರೂ ಇಲ್ಲೊಂದು ಆಲದ ಮರ ತನ್ನ ಬಿಳಲುಗಳಿಂದ ಇನ್ನೂ ಜೀವಂತಿಕೆ ಉಳಿಸಿಕೊಂಡಿದೆ. ಮಹಾರಾಷ್ಟ್ರದ ಕಲ್ಯಾಣ್ ಔರಂಗಾಬಾದ್ ರಸ್ತೆಯ ಬದಿಯಲ್ಲಿ ಬೆಳೆದು ನಿಂತಿರುವ ಈ ಹಳೆಯ ಆಲದ ಮರದ ಕಾಂಡವನ್ನು ಇತ್ತೀಚೆಗೆ ಯಾರೋ ಅನಾಮಿಕರು ರಾಸಾಯನಿಕ ಬಳಸಿ ಸುಟ್ಟಿದ್ದಾರೆ. ಅದರ ಫಲವಾಗಿ ವೃಕ್ಷ ಸಂಪೂರ್ಣ ಕಾಂಡದಿಂದ ಬೇರ್ಪಟ್ಟಿದೆ.

ಆದರೂ ತಾನು ಭೂಮಿಗೆ ಇಳಿಯಬಿಟ್ಟ ಹಲವಾರು ಬಿಳಲುಗಳಿಂದಾಗಿ ಮರವು ಸ್ವಾಭಾವಿಕವಾಗಿಯೇ ಹಚ್ಚ ಹಸುರಿನಿಂದ ಕೂಡಿದೆ. ಕೃತ್ರಿಮತೆ ಮೆರೆಯುವ ಮಾನವ, ಬುಡ ಕಿತ್ತರೂ ಛಲಬಿಡದೆ ಪ್ರಕೃತಿಯ ಉಳಿವಿಗಾಗಿ ಪಣತೊಟ್ಟು ತಲೆಯೆತ್ತಿ ನಿಂತ ಸೈನಿಕನಂತೆ ಗೋಚರಿಸಿ ದಾರಿಹೋಕರನ್ನು ಮಂತ್ರಮುಗ್ಧಗೊಳಿಸುತ್ತಿದೆ ಈ ವೃಕ್ಷ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

